ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾನಿರ್ದೇಶನಾಲಯ
ವಿಶ್ವೇಶ್ವರಯ್ಯಕೇಂದ್ರ, ಚಿಕ್ಕಗೋಪುರ, ಮೂರನೇ ಮಹಡಿ, ಡಾ|| ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-560 001,
**E-mail ID:** icps.kar@gmail.com

ಸಂಖ್ಯೆ: ಐಸಿಪಿಎಸ್/ದತ್ತು/19/2020-21 ದಿನಾಂಕ: 09.04.2021

## :ಸುತ್ತೋಲೆ:

ವಿಷಯ: ಮಕ್ಕಳನ್ನು ಕೊಳ್ಳುವವರ/ಮಾರಾಟ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ.
ಉಲ್ಲೇಖ: ಸುತ್ತೋಲೆ ಸಂಖ್ಯೆ: ಮಮಇ 170 ಮಭಾಬ 2018 ದಿನಾಂಕ 25.08.2018.

******

ಜಿಲ್ಲೆಗಳಲ್ಲಿ ರಕ್ಷಿಸಲ್ಪಡುತ್ತಿರುವ ಮಕ್ಕಳಲ್ಲಿ, ಅನಾಥ ಮಕ್ಕಳು, ಪರಿತ್ಯಕ್ತ ಮಕ್ಕಳು, ಒಪ್ಪಿಸಲ್ಪಟ್ಟ ಮಕ್ಕಳು ಮತ್ತು ಮಾರಾಟ ಮಾಡಿದ ಮಕ್ಕಳು ಒಳಗೊಂಡಿರುತ್ತಾರೆ. ಮಾರಾಟಕ್ಕೊಳಪಟ್ಟ ಮಕ್ಕಳ ಪ್ರಕರಣಗಳಲ್ಲಿ ಮಕ್ಕಳ ಕಲ್ಯಾಣ ಸಮಿತಿ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ನಿಯಮಾನುಸಾರ ಕಾರ್ಯ ನಿರ್ವಹಿಸದಿರುವುದು ಹಾಗೂ ಕಾನೂನು ಕ್ರಮ ಕೈಗೊಳ್ಳದಿರುವುದು ಕೇಂದ್ರ ಕಛೇರಿಯ ಗಮನಕ್ಕೆ ಬಂದಿರುತ್ತದೆ.

ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015 ಸೆಕ್ಷನ್ 81ರ ಅನ್ವಯ ಯಾವುದೇ ವ್ಯಕ್ತಿ ಕಾನೂನು ಬಾಹಿರವಾಗಿ ಮಕ್ಕಳನ್ನು ಮಾರುವುದು ಮತ್ತು ಕೊಳ್ಳುವುದು ಅಪರಾಧವಾಗಿದ್ದು, ಇಂತಹ ವ್ಯಕ್ತಿಗಳಿಗೆ 5 ವರ್ಷಗಳವರೆಗೆ ಕಠಿಣ ಕಾರಾಗೃಹ ಶಿಕ್ಷೆ ಮತ್ತು ರೂ.1,00,000/- ದಂಡ ವಿಧಿಸಬಹುದಾಗಿದೆ. ಇಂತಹ ಪ್ರಕರಣಗಳಲ್ಲಿ ಆಸ್ಪತ್ರೆ, ಹೆರಿಗೆ ಆಸ್ಪತ್ರೆ ಅಥವಾ ನರ್ಸಿಂಗ್ ಹೋಂ ಸಿಬ್ಬಂದಿಯವರು ಒಳಗೊಂಡಿದ್ದಲ್ಲಿ ಅಂತಹವರಿಗೆ 3 ವರ್ಷಗಳಿಗೆ ಕಡಿಮೆ ಇಲ್ಲದಂತೆ 7 ವರ್ಷಗಳಿಗೆ ಕಾರಾಗೃಹ ಶಿಕ್ಷೆಯನ್ನು ವಿಸ್ತರಿಸಬಹುದಾಗಿದೆ.

ಈಗಾಗಲೇ ಉಲ್ಲೇಖಿತ ಸುತ್ತೋಲೆಯಲ್ಲಿ ಆಸ್ಪತ್ರೆಗಳಲ್ಲಿ ಜನಿಸಿದ ಮಕ್ಕಳನ್ನು ಕಾನೂನು ಬಾಹಿರವಾಗಿ ಪರಭಾರೆ ಮಾಡುವುದು ಅಪರಾಧ ಎಂದು ಜಂಟಿ ಸುತ್ತೋಲೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳಿಂದ ಹೊರಡಿಸಲಾಗಿದೆ.

ಆದರೆ ಮಕ್ಕಳನ್ನು ಮಾರಾಟ ಮಾಡುತ್ತಿರುವವರ ಮೇಲೆ ಮಾತ್ರ ಪೋಲೀಸ್ ಠಾಣೆಯಲ್ಲಿ FIR ದಾಖಲಿಸುತ್ತಿದ್ದು, ಮಕ್ಕಳನ್ನು ಕೊಳ್ಳುವುದು ಸಹಾ ಕಾನೂನು ಬಾಹಿರ ಕೃತ್ಯವಾಗಿದ್ದು ಕೊಳ್ಳುವರ ಮೇಲೆ ಯಾವುದೇ FIR ದಾಖಲಿಸಲಾಗುತ್ತಿಲ್ಲ. ಇದರಿಂದ ಹಲವಾರು ಪ್ರಕರಣಗಳಲ್ಲಿ ಮಕ್ಕಳನ್ನು ಕೊಂಡುಕೊಂಡವರು ಮಗು rescue ಆದ ನಂತರ Courtಗೆ ಹೋಗಿ Visiting rights ಪಡೆಯುವುದು, ಅವರಿಗೆಯೇ ಮಗುವನ್ನು ದತ್ತು ನೀಡಬೇಕೆಂದು ಆದೇಶಗಳನ್ನು ಪಡೆಯುತ್ತಿರುವುದು ಇಲಾಖೆ ಗಮನಕ್ಕೆ ಬಂದಿರುತ್ತದೆ. ಈ ರೀತಿ ಕಾನೂನು ಬಾಹಿರವಾಗಿ ಮಗುವನ್ನು ಪಡೆದವರ ಮೇಲೆ FIR ದಾಖಲಿಸದಿದ್ದಲ್ಲಿ ಕಾನೂನು ಬಾಹಿರ ದತ್ತುವನ್ನು/ಕ್ರಮವನ್ನು ಪ್ರೋತ್ಸಾಹಿಸಿದಂತಾಗುತ್ತದೆ.

ಆದ್ದರಿಂದ ಇನ್ನು ಮುಂದೆ ಮಕ್ಕಳ ಮಾರಾಟ ಪ್ರಕರಣದಲ್ಲಿ ಮಕ್ಕಳನ್ನು ರಕ್ಷಿಸಿದ ಕೂಡಲೇ ಕಡ್ಡಾಯವಾಗಿ ಮಾರಾಟ ಮಾಡಿದವರು ಮತ್ತು ಕೊಂಡುಕೊಂಡವರ ವಿರುದ್ಧ FIR ಕಡ್ಡಾಯವಾಗಿ DCPO ಮತ್ತು PO(NIC) ದಾಖಲಿಸುವುದು, ಇಲ್ಲವಾದ್ದಲ್ಲಿ DCPO ಮತ್ತು PO(NIC) ಇವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು. ಒಂದು ವೇಳೆ ಪೋಲೀಸ್ ಠಾಣೆಯಲ್ಲಿ FIR ದಾಖಲಿಸಲು ನಿರಾಕರಿಸಿದ್ದಲ್ಲಿ ಆಯಾ

ಜಿಲ್ಲೆಯ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಧಿಕಾರಿ ಮತ್ತು ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಪೋಲೀಸ್ ಸೂಪರಿಟೆಂಡೆಂಟ್ ರವರಿಗೆ ಪೋಲೀಸರು FIR ದಾಖಲಿಸಲು ನಿರಾಕರಿಸಿದ ಬಗ್ಗೆ ಲಿಖಿತ ದೂರನ್ನು ಸಲ್ಲಿಸತಕ್ಕದ್ದು.

09.04.2021

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು.

ಪ್ರತಿಯನ್ನು: 1) ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಎಲ್ಲಾ ಜಿಲ್ಲೆಗಳು ಇವರ ಮಾಹಿತಿಗಾಗಿ.

2) ಅಧ್ಯಕರು, ಮಕ್ಕಳ ಕಲ್ಯಾಣ ಸಮಿತಿ ಎಲ್ಲಾ ಜಿಲ್ಲೆಗಳು ಇವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ.

3) ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಲ್ಲಾ ಜಿಲ್ಲೆಗಳು ಇವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ.